ನವೆಂಬರ್-2021

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ · ಸ್ವಚ್ಛ ಸಂಕೀರ್ಣ · ಸ್ವಚ್ಛಮೇವ ಜಯತೇ

# ಸ್ವಚ್ಛತಾವಾಣಿ

ವಾರ್ತಾಪತ್ರ

ಜಲೋತ್ಸವ ಮನೆ ಮನೆಗೆ ಗಂಗೆ · Har Ghar Jal Jal Jeevan Mission

## “ODF Plus Activities”



ಪ್ರಸ್ತುತ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯ **ಹಂತ–2** ಜಾರಿಯಲ್ಲಿದ್ದು, ಬಯಲು ಬಹಿರ್ದೆಸೆ ಮುಕ್ತ ಸುಸ್ಥಿರತೆಯನ್ನು ಕಾಪಾಡಲು ಹಾಗೂ ಸಮರ್ಪಕ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಮಾಡಲು **ODF Plus** ಚಟುವಟಿಕೆಗಳನ್ನು ರಾಜ್ಯಾದ್ಯಂತ ಹಂತ ಹಂತವಾಗಿ ಅನುಷ್ಠಾನ ಮಾಡಲಾಗುತ್ತಿದೆ. ಜನರ ನಡವಳಿಕೆಯಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ರಾಜ್ಯಾದ್ಯಂತ ನಿರಂತರವಾಗಿ ವಿವಿಧ **ಐ.ಇ.ಸಿ** ಮತ್ತು **ಹೆಚ್.ಆರ್.ಡಿ** ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಎಲ್ಲೆಡೆ ಜಾಥಾ, ಶ್ರಮದಾನ, ಶಾಲಾ ಮಕ್ಕಳಿಗೆ ಪೇಂಟಿಂಗ್ ಹಾಗೂ ಪ್ರಬಂಧ ಬರೆಯುವ ಸ್ಪರ್ಧೆ, ಮನೆ ಮನೆ ಭೇಟಿ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪ್ರಸ್ತುತ ರಾಜ್ಯಾದ್ಯಂತ ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಭಾರತ ಸರ್ಕಾರ ಇವರು ಆಯೋಜಿಸಿರುವ **“Dus Ka Dum Swachhata Har Dum”** ಎಂಬ ಹೆಸರಿನ ವಿಶೇಷ ಆಂದೋಲನದಡಿ ನೀಡಲಾಗಿರುವ 10 ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.





## “ವಿಶ್ವ ಶೌಚಾಲಯ ದಿನ”

ವಿಶ್ವದಾದ್ಯಂತ 19ನೇ ನವೆಂಬರ್ ಅನ್ನು ಶೌಚಾಲಯ ದಿನವನ್ನಾಗಿ ಆಚರಿಸಲಾಗುತ್ತದೆ. ಈ ವಿಶೇಷ ದಿನವನ್ನು ರಾಜ್ಯಾದ್ಯಂತ ಸ್ವಚ್ಛತಾ ಉತ್ಸವವನ್ನಾಗಿ ಆಚರಿಸಲಾಯಿತು. ವಿಶೇಷವಾಗಿ ಶಾಲಾ ಮಕ್ಕಳಲ್ಲಿ ಸ್ವಚ್ಛತೆಯ ಅರಿವನ್ನು ಮೂಡಿಸುವ ನಿಟ್ಟಿನಲ್ಲಿ ಶಾಲಾ ಮಕ್ಕಳಿಗೆ **ಶೌಚಾಲಯ ಬಳಕೆ** ಹಾಗೂ **ವೈಯಕ್ತಿಕ ಶುಚಿತ್ವ** ಕುರಿತು ತರಬೇತಿ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇನ್ನು ಹಲವೆಡೆಗಳಲ್ಲಿ ಶಾಲಾ ಮಕ್ಕಳಿಂದ ಜಾಥಾ, ಶ್ರಮದಾನ, ಶೌಚಾಲಯ ಬಳಕೆ ಬಗ್ಗೆ ಪ್ರಾತ್ಯಕ್ಷಿಕೆ ಸೇರಿದಂತೆ ಪ್ರತಿಜ್ಞಾವಿಧಿ ಬೋಧಿದಿಸುವ ಮೂಲಕ ರಾಜ್ಯಾದ್ಯಂತ **ವಿಶ್ವ ಶೌಚಾಲಯ** ದಿನವನ್ನು ವಿಶೇಷವಾಗಿ ಆಚರಿಸಲಾಯಿತು.






## ತರಬೇತಿ ಕಾರ್ಯಕ್ರಮಗಳು

### “IMIS ತರಬೇತಿ ಕಾರ್ಯಾಗಾರ”



**ಸ್ವಚ್ಛ ಭಾರತ್ ಮಿಷನ್** ಯೋಜನೆಯಡಿ **ODF Plus** ಘೋಷಣೆ, **ಸ್ವಚ್ಛ ಸರ್ವೇಕ್ಷಣ ಗ್ರಾಮೀಣ–2021, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯ ಪ್ರಗತಿ, ಶೌಚಾಲಯಗಳ** ನಿರ್ಮಾಣದ ಪ್ರಗತಿ, ಆರ್ಥಿಕ ಪ್ರಗತಿ ಸೇರಿದಂತೆ ಯೋಜನೆಯ ಎಲ್ಲಾ ಚಟುವಟಿಕೆಗಳನ್ನು, ಭಾರತ ಸರ್ಕಾರದ **IMIS Portal** ನಲ್ಲಿ ನಮೂದಿಸುವ ಕುರಿತು ಎಲ್ಲಾ ಜಿಲ್ಲೆಗಳ **IMIS** ಜಿಲ್ಲಾ ಸಮಾಲೋಚಕರು ಹಾಗೂ ಒಬ್ಬರು ಆಯ್ದ ಜಿಲ್ಲಾ ಸಮಾಲೋಚಕರುಗಳಿಗೆ 25 ಮತ್ತು 26ನೇ ನವೆಂಬರ್‌ಗಳಂದು ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯಾಗಾರದಲ್ಲಿ **ಆಯುಕ್ತರು ಗ್ರಾ.ಕು.ನೀ&ನೈ ಇಲಾಖೆ, ಉಪ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್(ಗ್ರಾ), ಗ್ರಾ.ಕು.ನೀ&ನೈ ಇಲಾಖೆ** ಸೇರಿದಂತೆ ರಾಜ್ಯ ಕಚೇರಿಯ ಇತರೆ ಸಮಾಲೋಚಕರು ಶಿಬಿರಾರ್ಥಿಗಳಿಗೆ ತರಬೇತಿ ನೀಡಿದರು.


